ಆ) ಹತ್ತಾರು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸುಶಿಕ್ಷಿತರಿಗಾಗಿ ಹೊಸ ಹೈಟೆಕ್ ಗ್ರಂಥಾಲಯ ನಿರ್ಮಿಸಲು ಸರ್ಕಾರದ ಉದ್ದೇಶವೇನಾದರೂ ಇದೆಯೇ;

ಇ) ಹಾಗಿದ್ದಲ್ಲಿ, ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ಈ ಬಗ್ಗೆ ಹಣ ನಿಗಧಿಗೊಳಿಸಲಾಗುವುದೆ?

ಶ್ರೀ ರೇವೂ ನಾಯಕ್ ಬೆಳಮಗಿ (ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು) :

ಅ) – ಇಲ್ಲ –

ಆ) – ಇದೆ –

ಇ) 2011–12ನೇ ಸಾಲಿನ ಆಯ–ವ್ಯಯದಲ್ಲಿ ನಿಗಧಿಗೊಳಿಸ ಲಾಗುವುದು.

ಜಮಖಂಡಿ ಗ್ರಂಥಾಲಯ ಮೇಲ್ದರ್ಜೆಗೇರಿಸುವುದು

480 (689) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಪಟ್ಟಣದಲ್ಲಿರುವ ಸಾರ್ವಜನಿಕ ಗ್ರಂಥಾಲಯ ಎಷ್ಟು ವರ್ಷಗಳಿಂದ ಕಾರ್ಯ ಮಾಡುತ್ತಿದೆ;

ಆ) ಈ ಗ್ರಂಥಾಲಯನ್ನು ಇಲ್ಲಿಯವರೆಗೆ ಅಗತ್ಯಕ್ಕೆ ತಕ್ಕ ಹಾಗೇ ಮೇಲ್ದರ್ಜೆಗೆ ಏರಿಸಿಲ್ಲವೆಂಬುದನ್ನು ಸರ್ಕಾರ ಮನಗಂಡಿದೆಯೇ;

ಇ) ಈ ಗ್ರಂಥಾಲಯವನ್ನು ಮೇಲ್ದರ್ಜೆಗೆ ಏರಿಸಿ (Hightech) ಸಹಸ್ರಾರು ಸಂಖ್ಯೆಯಲ್ಲಿರುವ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಲು ಸರ್ಕಾರ ಪ್ರಸಕ್ತ ಸಾಲಿನಲ್ಲಿ ಮಂಜೂರು ನೀಡಬಹುದೇ?

ಶ್ರೀ ರೇವೂ ನಾಯಕ್ ಬೆಳಮಗಿ (ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು) :

ಅ) 36 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ.

ಆ) ಮನಗಂಡಿದೆ.

ಇ) ನಿವೇಶನ ಲಭ್ಯವಾದಲ್ಲಿ ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು.

ಶಿವಮೊಗ್ಗ ಜಿಲ್ಲೆಯಲ್ಲಿ ಪಾನೀಯ ನಿಗಮದ ಮದ್ಯದ ಮಳಿಗೆ

484 (474) ಶ್ರೀ ಕುಮರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಪಾನೀಯ ನಿಗಮದಿಂದ ಪ್ರಾರಂಭಿಸಲಾಗುವ ಮದ್ಯದ ಅಂಗಡಿಗಳು ಎಷ್ಟು; (ಗ್ರಾಮ ವಾರು–ಗ್ರಾಮಪಂಚಾಯಿತಿ ವಾರು ವಿವರ ನೀಡುವುದು);

ಆ) ಈ ಗ್ರಾಮಗಳಲ್ಲಿರುವ ವಿದೇಶಿ ಮದ್ಯದ ಅಂಗಡಿಗಳೆಷ್ಟು; (ಅಧಿಕೃತ, ಅನಧಿಕೃತ ಸಾರಾಯಿ ಅಂಗಡಿಗಳ ವಿವರ ನೀಡುವುದು);

ಇ) ಖಾಸಗಿ ಮದ್ಯದ ಅಂಗಡಿ, MSIL ಮದ್ಯದ ಅಂಗಡಿ ಇವುಗಳನ್ನು ಸ್ಥಾಪಿಸಲು ದರ ನಿಗದಿ ಮಾಡಲಾಗಿದೆಯೇ ಹಾಗೂ ಇವುಗಳನ್ನು ತೆರೆಯಲು ಇರುವ ಮಾನದಂಡಗಳೇನು;

ಈ) ಈ ಮದ್ಯದ ಅಂಗಡಿಗಳನ್ನು ಧಾರ್ಮಿಕ ಸ್ಥಳ, ದೇವಸ್ಥಾನ, ಶಾಲಾ ಕಾಲೇಜುಗಳಿಂದ ಎಷ್ಟು ಮೀಟರ್ ಅಂತರದಲ್ಲಿ ತೆರೆಯಬೇಕು ಎಂಬ ಮಾನದಂಡವನ್ನು ಉಲ್ಲಂಘಿಸಿರುವ ಪ್ರಕರಣಗಳೆಷ್ಟು; (ವಿವರ ನೀಡುವುದು)?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು ಮದ್ಯದಗಂಡಿಗಳನ್ನು ಪ್ರಾರಂಭಿಸುವುದಿಲ್ಲ. ಆದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಪಾನೀಯ ನಿಗಮದ ಎರಡು ಮದ್ಯದ ವಿತರಣಾ ಡಿಪೋಗಳು ಶಿವಮೊಗ್ಗ ಹಾಗೂ ಸಾಗರ ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಕಾರ್ಯ ನಿರ್ವಹಿಸುತ್ತಿವೆ.